# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 554**

**ಉತ್ತರಿಸಬೇಕಾದ ದಿನಾಂಕ : 11-12-2025**

**ಉತ್ತರಿಸಬೇಕಾದ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಗಳು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಹಕಾರಿ ನಿಯಮಗಳಡಿ ವಿವಿಧ ರೀತಿಯ ಸಹಕಾರಿ ಸಂಸ್ಥೆಗಳಲ್ಲಿ ಇರುವ ಮಹಿಳಾ ಪ್ರಾತಿನಿಧ್ಯ ಎಷ್ಟು; ಪ್ರಸ್ತುತ ಇರುವ ಮಹಿಳಾ ಪದಾಧಿಕಾರಿ ಮತ್ತು ಸಿಬ್ಬಂದಿಗಳ ಅನುಪಾತ ಎಷ್ಟು; | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ.28-ಎ(3) (ii) ರನ್ವಯ ಸಹಕಾರ ಸಂಘಗಳ ವ್ಯವಸ್ಥಾಪನೆಯ ಮಂಡಳಿಯಲ್ಲಿ ನಿಹಿತವಾಗಿರತಕ್ಕದ್ದಾಗಿದ್ದು, ಆಡಳಿತ ಮಂಡಳಿಯ ಪೈಕಿ 02 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿರಿಸಲಾಗಿದೆ. ಪ್ರಸ್ತುತ ಇರುವ ಮಹಿಳಾ ಪದಾಧಿಕಾರಿ ಮತ್ತು ಸಿಬ್ಬಂದಿಗಳ ಅನುಪಾತದ ವಿವರಗಳನ್ನು ಜಿಲ್ಲಾವಾರು **ಅನುಬಂಧದಲ್ಲಿ** ನೀಡಲಾಗಿದೆ. |
| ಆ) | ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳನುಸಾರ ಸಹಕಾರಿ ಸಂಸ್ಥೆಗಳಲ್ಲಿ ಎಷ್ಟು ಮಹಿಳಾ ನಿರ್ದೇಶಕರನ್ನು ಹೊಂದಿರಬೇಕಾಗಿದೆ; ರಾಜ್ಯದ ಸಹಕಾರಿ ಸಂಸ್ಥೆಗಳಲ್ಲಿ ಇದು ಪಾಲನೆಯಾಗಿದೆಯೇ; | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ.28-ಎ(3)(ii) ರೀತ್ಯಾ ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ 02 ನಿರ್ದೇಶಕರ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿರಿಸಲಾಗಿದ್ದು, ಸದರಿ ನಿಯಮವನ್ನು ಸಹಕಾರ ಸಂಸ್ಥೆಗಳು ಪಾಲಿಸುತ್ತಿರುತ್ತವೆ.<br><br>ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2025 ರಲ್ಲಿ ಕಲಂ 53(ಎ) ಮರು ಸೇರ್ಪಡಿಸಿ ರಾಜ್ಯ ಸರ್ಕಾರದ ಮೂಲಕ ಸಂಘದ ಆಡಳಿತ ಮಂಡಳಿಗೆ 03 ಜನ ಸದಸ್ಯರನ್ನು ನಾಮನಿರ್ದೇಶನ ಮಾಡಲು ಅವಕಾಶವಿದ್ದು, ಈ ಪೈಕಿ ಒಂದು ಸ್ಥಾನವನ್ನು ಮಹಿಳೆಯರಿಗೆ ಮೀಸಲಿರಿಸಿದೆ. ಈ ಕುರಿತು ಕಾಯ್ದೆಯಲ್ಲಿ ಅಳವಡಿಸಲಾಗಿರುತ್ತದೆ ಹಾಗೂ ನಿಯಮ ರಚನಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ವಿವಿಧ ರೀತಿಯ ಸಹಕಾರಿ ಸಂಸ್ಥೆಗಳಲ್ಲಿರುವ ಪ್ರಸ್ತುತ ಮಹಿಳಾ ನಿರ್ದೇಶಕರುಗಳ ಸಂಖ್ಯೆಯೆಷ್ಟು: | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ವಿವಿಧ ರೀತಿಯ ಸಹಕಾರ ಸಂಘಗಳಲ್ಲಿ ಕ್ರಮವಾಗಿ 2694 ಮತ್ತು 1153 ಮಹಿಳಾ ನಿರ್ದೇಶಕರುಗಳು ಇರುತ್ತಾರೆ. |

| | | |
|---|---|---|
| ಈ) | ಪ್ರಸ್ತುತ ಕರ್ನಾಟಕ ರಾಜ್ಯದ ಸಹಕಾರಿ ಸಂಸ್ಥೆಗಳಲ್ಲಿ ಇರುವ ಮಹಿಳಾ ನಿರ್ದೇಶಕರುಗಳ ಜೊತೆಗೆ ಹೆಚ್ಚುವರಿ ಮಹಿಳಾ ನಿರ್ದೇಶಕರುಗಳನ್ನು ನೇಮಿಸಲು ಅವಕಾಶವಿದೆಯೇ: ಈ ಕುರಿತು ನಿಯಮ ರೂಪಿಸಲಾಗುವುದೇ: | ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2025 ರಲ್ಲಿ ಕಲಂ 53(ಎ) ಸೇರ್ಪಡಿಸಿ ರಾಜ್ಯ ಸರ್ಕಾರದ ಮೂಲಕ ಸಂಘದ ಆಡಳಿತ ಮಂಡಳಿಗೆ 03 ಸದಸ್ಯರನ್ನು ನಾಮನೀರ್ದೇಶನ ಮಾಡುವಾಗ ಆ ಪೈಕಿ 01 ಸ್ಥಾನವನ್ನು ಮಹಿಳೆಯರಿಗೆ ಮೀಸಲಿರಿಸಿದೆ. ಈ ಕುರಿತು ಕಾಯ್ದೆಯಲ್ಲಿ ಅಳವಡಿಸಲಾಗಿರುತ್ತದೆ ಹಾಗೂ ನಿಯಮ ರಚನಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಉ) | ಪ್ರಸ್ತುತ ಕರ್ನಾಟಕ ರಾಜ್ಯದ ಸಹಕಾರಿ ಸಂಸ್ಥೆಗಳಲ್ಲಿ ಮಹಿಳಾ ನಿರ್ದೇಶಕರು ಮತ್ತು ಇತರ ಉನ್ನತ ಹುದ್ದೆ ಮತ್ತು ಸಿಬ್ಬಂದಿಗಳ ಸಹಿತ ಮಹಿಳೆಯರಿಗೆ ಯೋಗ್ಯ ಪ್ರಾತಿನಿಧ್ಯ ಲಭ್ಯವಾಗುವಂತೆ ಕಾನೂನು ತಿದ್ದುಪಡಿ ಸಹಿತ ಇತರ ಕ್ರಮಗಳ ಕುರಿತು ಸರಕಾರ ಯಾವ ಕ್ರಮವಹಿಸಿದೆ: ಇದನ್ನು ಯಾವಾಗ ಜಾರಿಗೆ ತರಲಾಗುವುದು? | ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2025 ರಲ್ಲಿ ಕಲಂ 53(ಎ) ಸೇರ್ಪಡಿಸಿ ರಾಜ್ಯ ಸರ್ಕಾರದ ಮೂಲಕ ಸಂಘದ ಆಡಳಿತ ಮಂಡಳಿಗೆ 03 ಸದಸ್ಯರನ್ನು ನಾಮನೀರ್ದೇಶನ ಮಾಡುವಾಗ ಆ ಪೈಕಿ 01 ಸ್ಥಾನವನ್ನು ಮಹಿಳೆಯರಿಗೆ ಮೀಸಲಿರಿಸಿದೆ. ಈ ಕುರಿತು ಕಾಯ್ದೆಯಲ್ಲಿ ಅಳವಡಿಸಲಾಗಿರುತ್ತದೆ ಹಾಗೂ ನಿಯಮ ರಚನಾ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br><br>ಸಿಬ್ಬಂದಿ ನೇಮಕಾತಿ ಸಂಬಂಧ ರಾಜ್ಯ ಸರ್ಕಾರ ರೂಪಿಸಿರುವ ನಿಯಮಗಳನ್ವಯ ಆಯಾ ಸಹಕಾರ ಸಂಘಗಳು ನೇಮಕಾತಿ ಪ್ರಕ್ರಿಯೆ ನಡೆಸುತ್ತಿರುತ್ತವೆ. |

**ಸಂಖ್ಯೆ: ಸಿಒ 125 ಸಿಎಲ್‌ಎಂ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ-1

| ಕ್ರ | ಜಿಲ್ಲೆಗಳು | ಕಾರ್ಯನಿರತ ಸಹಕಾರ ಸಂಘಗಳು | ಮಹಿಳಾ ನಿರ್ದೇಶಕರು | ಪದಾಧಿಕಾರಿಗಳು | ಸಿಬ್ಬಂದಿಗಳು | ಮಹಿಳಾ ಸಿಬ್ಬಂದಿ |
|---|---|---|---|---|---|---|
| | | | **ಬೆಂಗಳೂರು** | | | |
| 1 | 1 ನೇ ವಲಯ, ಬೆಂಗಳೂರು ನಗರ ಜಿಲ್ಲೆ | 830 | 1989 | 1443 | 2287 | 686 |
| 2 | 2 ನೇ ವಲಯ, ಬೆಂಗಳೂರು ನಗರ ಜಿಲ್ಲೆ | 555 | 261 | 152 | 1718 | 212 |
| 3 | 3 ನೇ ವಲಯ, ಬೆಂಗಳೂರು ನಗರ ಜಿಲ್ಲೆ | 754 | 1482 | 1502 | 3678 | 1329 |
| 4 | 4 ನೇ ವಲಯ, ಬೆಂಗಳೂರು ನಗರ ಜಿಲ್ಲೆ | 784 | 408 | 68 | 2485 | 1478 |
| 5 | ಬೆಂ. ಗ್ರಾಮಾಂತರ | 1152 | 2285 | 123 | 2586 | 325 |
| 6 | ಬೆಂ. ದಕ್ಷಿಣ ಜಿಲ್ಲೆ (ರಾಮನಗರ) | 1386 | 2754 | 180 | 3454 | 223 |
| 7 | ಕೋಲಾರ | 1427 | 2854 | 68 | 4712 | 594 |
| 8 | ಚಿಕ್ಕಬಳ್ಳಾಪುರ | 1301 | 2602 | 436 | 3590 | 1020 |
| 9 | ತುಮಕೂರು | 2352 | 5943 | 834 | 8952 | 1074 |
| 10 | ಚಿತ್ರದುರ್ಗ | 779 | 2337 | 441 | 1370 | 264 |
| 11 | ದಾವಣಗೆರೆ | 1276 | 4528 | 478 | 2995 | 637 |
| 12 | ಶಿವಮೊಗ್ಗ | 1278 | 3645 | 408 | 3159 | 730 |
| | ಒಟ್ಟು | 13874 | 31188 | 6133 | 40986 | 8572 |
| | | | **ಮೈಸೂರು** | | | |
| 13 | ಮೈಸೂರು | 2417 | 8978 | 3480 | 5315 | 1161 |
| 14 | ಚಾಮರಾಜನಗರ | 714 | 2336 | 285 | 1220 | 220 |
| 15 | ಮಂಡ್ಯ | 2098 | 2386 | 708 | 6789 | 2189 |
| 16 | ಹಾಸನ | 2037 | 11023 | 854 | 4569 | 1848 |
| 17 | ಚಿಕ್ಕಮಗಳೂರು | 657 | 2870 | 448 | 1628 | 515 |
| 18 | ಕೊಡಗು | 305 | 992 | 92 | 1014 | 142 |
| 19 | ದಕ್ಷಿಣ ಕನ್ನಡ | 846 | 2694 | 208 | 6703 | 2524 |
| 20 | ಉಡುಪಿ | 709 | 1153 | 285 | 3112 | 1392 |
| | ಒಟ್ಟು | 9783 | 32432 | 6360 | 30350 | 9991 |

| | | | | | | |
|---|---|---|---|---|---|---|
| | | **ಬೆಳಗಾವಿ** | | | | |
| 21 | ಬೆಳಗಾವಿ | 5570 | 12240 | 1267 | 16710 | 1524 |
| 22 | ವಿಜಯಪುರ | 1495 | 3160 | 360 | 5482 | 474 |
| 23 | ಬಾಗಲಕೋಟೆ | 1985 | 4120 | 382 | 6120 | 531 |
| 24 | ಧಾರವಾಡ | 938 | 1942 | 335 | 2940 | 283 |
| 25 | ಗದಗ | 1008 | 2146 | 390 | 3214 | 312 |
| 26 | ಹಾವೇರಿ | 1293 | 2670 | 84 | 3972 | 410 |
| 27 | ಉತ್ತರ ಕನ್ನಡ | 914 | 1930 | 346 | 2842 | 305 |
| | ಒಟ್ಟು | 13203 | 28208 | 3164 | 26240 | 3839 |
| | | **ಕಲಬುರಗಿ** | | | | |
| 28 | ಬೀದರ | 765 | 2531 | 182 | 3825 | 255 |
| 29 | ಕಲಬುರಗಿ | 1161 | 2829 | 128 | 1734 | 197 |
| 30 | ಯಾದಗಿರ | 674 | 1684 | 53 | 2113 | 165 |
| 31 | ರಾಯಚೂರು | 961 | 2979 | 306 | 1616 | 198 |
| 32 | ಕೊಪ್ಪಳ | 733 | 2976 | 330 | 1088 | 231 |
| 33 | ಬಳ್ಳಾರಿ | 526 | 984 | 120 | 1935 | 164 |
| 34 | ವಿಜಯನಗರ | 709 | 3671 | 516 | 2599 | 446 |
| | ಒಟ್ಟು | 5529 | 17654 | 1635 | 14910 | 1656 |
| | **ಒಟ್ಟು** | **42389** | **109482** | **17292** | **127526** | **24058** |

ಸಹಕಾರ ಸಂಘಗಳ ಜಂಟಿ ನಿಬಂಧಕರು
(ಕಾನೂನು ಕೋಶ)